# ಎಮ್ಮ ಮನೆಯಂಗಳದ 'ಗುಡ್ಡಿ' ಹೂ..




**ಮುದ್ದಿನ ಮಗಳ ಸವಿನೆನಪಿನಲ್ಲಿ ತಂದ 'ಗುಡ್ಡಿ'ಯನ್ನು ಬಹಳ ವರ್ಷ ಮಗಳಂತೆಯೇ ನೋಡಿಕೊಂಡು ಕೊನೆಗೆ ವಾಹನ ಮ್ಯೂಸಿಯಂಗೆ ನೀಡಿದಾಗ ಕಣ್ಣಾಲಿಗಳು ತುಂಬಿ ಬಂದವು.**

**■ ಮಂಜುಳಾ ಸುಂದರ್ ರಾಜ್**

**1978**ರಲ್ಲಿ ನನ್ನ ಪತಿ 'ಬಜಾಜ್ ಚೇತಕ್'ನ ಒಡೆಯರಾದಾಗ ಸಂತಸ ಹಾಗೂ ದುಃಖದ ಅನುಭವ ಒಟ್ಟೊಟ್ಟಿಗೆ ಆಗಿತ್ತು. ಕಾರಣ ನಮ್ಮ ಮುದ್ದಿನ ಮಗಳು 'ಗುಡ್ಡಿ' ನಮ್ಮನ್ನು ಬಿಟ್ಟು ಪರಲೋಕಕ್ಕೆ ತೆರಳಿ ಒಂದು ವರ್ಷವಾಗಿತ್ತು. 'ಪಪ್ಪ ನೀನು ಯಾವಾಗ ಸ್ಕೂಟರ್ ತಗೋತೀಯ?' ಎನ್ನುವ ಅವಳ ಮುಗ್ಧ ಪ್ರಶ್ನೆಗೆ ಅಂದು ಉತ್ತರ ದೊರಕಿತ್ತು. ಆದರೆ, ಬದುಕಿರುವಾಗ ಅವಳಾಸೆ ಪೂರ್ಣವಾಗಲೇ ಇಲ್ಲ. ಐದು ವರ್ಷದ ಬಾಲೆ ಎರಡೇ ದಿನಗಳಲ್ಲಿ ಮಾಯವಾಗಿ ಹೋದಳು.

ಇಡೀ ಮೈಸೂರಿನಲ್ಲೇ ಬಹುಶಃ ಎರಡನೆಯದಾದ ಈ ವಾಹನ, ನಮಗೆ ನಮ್ಮ ಮಗಳೇ ಈ ರೂಪದಲ್ಲಿ ಮರಳಿದ್ದಾಳೆ ಎನ್ನುವ ಭಾವವನ್ನುಂಟು ಮಾಡಿತು. ಅಂದಿನಿಂದ ಅದೇ ನಮ್ಮ ಪಾಲಿಗೆ ನಮ್ಮ ಮುದ್ದಿನ ಗುಡ್ಡಿಯಾಯಿತು. ನಲವತ್ತು ವರ್ಷಗಳ ಕಾಲ ಅದು ನಮಗೆ ಸಲ್ಲಿಸಿದ ಸೇವೆಗೆ ಎಣೆಯಿಲ್ಲ. ಅಪಘಾತಗಳಾದರೂ ಪ್ರತಿ ಬಾರಿಯೂ ಆಶ್ಚರ್ಯಕರವಾದ ರೀತಿಯಲ್ಲಿ ಜೀವ ಉಳಿದಾಗ 'ನಮ್ಮ ಮಗಳೇ ನಮ್ಮ ದೇವತೆ, ಅವಳೇ ನಮ್ಮನ್ನು ರಕ್ಷಿಸಿದಳು' ಎನ್ನುವ ಭಾವ. ಮನೆಯಿಂದ ಹೊರಡುವಾಗ ಮಗಳ ಫೋಟೊ ನೋಡದೇ ಇಂದಿಗೂ ನಾವು ಹೊರ ಬೀಳುವುದಿಲ್ಲ. ವಾಹನವನ್ನು ಏರುವ ಮೊದಲು ಅದನ್ನು ಕಣ್ಣಿಗೊತ್ತಿಕೊಳ್ಳದೆ ಹೊರಡಿಸಿಲ್ಲ. ಮೈಸೂರಿನಲ್ಲಿ ಎಲ್ಲೇ ನಿಲ್ಲಿಸಿದ್ದರೂ 'ಇದು ಶೇಷಾಚಲಂ ಅವರದು' ಅಂತ ಜನ ಗುರುತಿಸುವಷ್ಟು ಖ್ಯಾತಿಯನ್ನು ಇದು ಪಡೆದಿತ್ತು.

ಎಷ್ಟೇ ವ್ಯಾಮೋಹವಿದ್ದರೂ ಎಲ್ಲದಕ್ಕೂ ಕೊನೆ ಎಂಬುದು ಇದ್ದೇ ಇರುತ್ತದೆ ಅಲ್ಲವೇ. ನಮಗೂ ವಯಸ್ಸಾಯಿತು. ಕಳೆದ ಒಂದೆರಡು ವರ್ಷಗಳಲ್ಲಿ ವಾಹನವನ್ನು ಸರ್ವೀಸ್ ಮಾಡಿಸಿ, ಆಗಾಗ ಸ್ಟಾರ್ಟ್ ಮಾಡುವುದು ಅಷ್ಟೇ. ಆದರೂ ನೋಡಿದವರೆಲ್ಲ 'ಗಾಡಿ ಹಳೆಯದು ಅಂತ ಅನ್ನಿಸುವುದೇ ಇಲ್ಲ. ನೀವು ಮಾರಿದರೆ ಒಳ್ಳೆಯ ಬೆಲೆ ಬರುತ್ತೆ'ಎನ್ನುತ್ತಿದ್ದರು. ಇಂಥ ನಮ್ಮ ಮಾನಸ ಪುತ್ರಿಯನ್ನು ಮಾರುವ ವಿಚಾರ ಕನಸು ಮನಸಿನಲ್ಲೂ ಇರಲಿಲ್ಲ. ನಮ್ಮ ನಂತರ ಅದನ್ನು ಮುಚ್ಚಟೆಯಿಂದ ಕಾಪಾಡುವವರು ಬೇಕಿತ್ತು.

ಧರ್ಮಸ್ಥಳದ 'ಮಂಜೂಷಾ' ಮ್ಯೂಸಿಯಂಗೆ ವಿನಂತಿಸಿಕೊಂಡೆವು. ಅಲ್ಲಿ ಸ್ಥಳಾವಕಾಶ ಇಲ್ಲ ಎಂದರು. ಹೀಗಿರುವಾಗ ಕೇರಳದ ಕೆ.ವಿ. ವಿಜೇಶ್ ಎಂಬುವರು ವಾಹನಗಳ ಸಂಗ್ರಹ ಮಾಡುತ್ತಿದ್ದಾರೆ, ಸದ್ಯದಲ್ಲೇ ವಿಂಟೇಜ್ ವಾಹನಗಳ ಮ್ಯೂಸಿಯಂ ತೆರೆಯುವ ಯೋಚನೆಯಲ್ಲಿರುವ ವಿಷಯ ತಿಳಿಯಿತು. ಅವರು ವೃತ್ತಿಯಿಂದ 'ಪ್ರವಾಸಿ ಗೈಡ್' ಎಂಬ ಮಾಹಿತಿ ದೊರಕಿತು. ದೂರವಾಣಿಯ ಮೂಲಕ ಸಂಪರ್ಕ ಸಾಧಿಸಿದಾಗ ಅವರು ಇಲ್ಲಿಗೆ ಬರಲು ಒಪ್ಪಿದರು. ಅವರು ಬಹುಶಃ ಈ 'ಮಾನ್ಯುಮೆಂಟ್' ಟೈಪ್ ವಾಹನದ ಬದಲಿಗೆ ಒಂದು ಒಳ್ಳೆಯ ಮೊತ್ತ ನಿರೀಕ್ಷಿಸುತ್ತೇವೆ ಎಂದುಕೊಂಡಿದ್ದರೇನೊ? 'ನಮ್ಮ ವಾಹನ ಸುಸ್ಥಿತಿಯಲ್ಲಿದೆ. ಮೈಲೇಜು ಕೂಡ ಚೆನ್ನಾಗಿದೆ. ನೀವು ಇದನ್ನು ಜೋಪಾನವಾಗಿ ಇಟ್ಟುಕೊಂಡು ನಾವೆಂದಾದರೂ ಬಂದಾಗ ನೋಡಲು ಸಿಕ್ಕರೆ ಅಷ್ಟೇ ಸಾಕು. ಇದು ನಮ್ಮ ಮಗಳ ಸಮಾನ. ಇದಕ್ಕಾಗಿ ಒಂದು ರೂಪಾಯಿ ಕೂಡ ನಮಗೆ ಬೇಡ' ಎಂದು ಇವರು ಹೇಳಿದಾಗ, ವಿಜೇಶ್‌ಗೆ ಕ್ಷಣ ಕಾಲ ನಂಬಲಾಗಲೇ ಇಲ್ಲ. 'ನಿಮ್ಮಂಥವರನ್ನು ಮೊದಲ ಬಾರಿಗೆ ನೋಡ್ತಾ ಇದೀನಿ' ಎಂದು ಉದ್ಗರಿಸಿದ್ದರು.

ಕೊನೆಗೂ 'ಗುಡ್ಡಿ' ನಮ್ಮನ್ನು ಅಗಲುವ ಸಮಯ (ಏಪ್ರಿಲ್ 21) ಬಂದೇ ಬಿಟ್ಟಿತು. ಹೃದಯ ತುಂಬಿ ಬಂತು. ಸನಿಹದ ಪ್ರಿಯ ವ್ಯಕ್ತಿ ದೂರವಾಗುತ್ತಿರುವ ಅನುಭವ. ಹೊಟ್ಟೆಯಲ್ಲಿ ತಳಮಳ. ಮನಸ್ಸಿಗೆ ಏನೋ ನೆಮ್ಮದಿ. ವಿದಾಯ ಹೇಳುವಾಗ ಮಗಳನ್ನು ಅತ್ತೆ ಮನೆಗೆ ಕಳಿಸುವ ಅನುಭವ. ತುಂಬಿದ ಕಣ್ಣಾಲಿಗಳೊಂದಿಗೆ ನಮ್ಮ ಮುದ್ದಿನ 'ಗುಡ್ಡಿ'ಗೆ ಶುಭ ಕೋರಿ ವಿದಾಯ ಹೇಳಿದೆವು.

ದೈಹಿಕವಾಗಿ ನಲವತ್ತು ವರ್ಷಗಳ ಈ ನಂಟು ಅಲ್ಲಿಗೆ ಕೊನೆಗೊಂಡಿತು. ಆದರೆ, ಮಾನಸಿಕವಾಗಿ ನಮ್ಮ ಕೊನೆಯುಸಿರು ಇರುವವರೆಗೂ ನಮ್ಮನ್ನು ಅಗಲಿದ ಮಗಳು 'ಗುಡ್ಡಿ' ಹಾಗೂ ನಮ್ಮ ಈ ಇನ್ನೊಬ್ಬ 'ಗುಡ್ಡಿ' ನಮ್ಮ ಹೃದಯ ಸಿಂಹಾಸನದಲ್ಲಿ ರಾರಾಜಿಸುತ್ತಲೇ ಇರುತ್ತಾರೆ. ■